ಆ) ಹಾಗಿದ್ದಲ್ಲಿ ಸಮಿತಿಯು ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮಾತ್ರ ತಾಂತ್ರಿಕ ಕೋರ್ಸ್‌ಗಳನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರವು ಸಮಿತಿಯ ಶಿಫಾರಸ್ಸನ್ನು ಜಾರಿಗೊಳಿಸಲು ಒಪ್ಪಿದೆಯೇ?

ಈ) ಸಮಿತಿಯ ಶಿಫಾರಸ್ಸನ್ನು ಜಾರಿಗೊಳಿಸಲು ಬೇಕಾಗುವ ಹಣ ಎಷ್ಟು?

ಶ್ರೀ ಪ್ರಭಾಕರ್ ಎಸ್.ರಾಣೆ (ವಯಸ್ಕರ ಶಿಕ್ಷಣ ಸಚಿವರು) :

ಆ) ಹೌದು ಸಲ್ಲಿಸಿದೆ.

ಆ) ಹೌದು.

ಇ) ಹೌದು. ಸಮಿತಿಯ ಶಿಫಾರಸ್ಸಿನಂತೆ 1991-92 ನೇ ಸಾಲಿನಲ್ಲಿ 50 ವೃತ್ತಿ ಶಿಕ್ಷಣ ಕೋರ್ಸುಗಳನ್ನು ಗುರುತಿಸಲಾದ 15 ಕಸಬುಗಳಲ್ಲಿ, 33 ಇಂಜಿನಿಯರಿಂಗ್ ಕಾಲೇಜುಃ ಪಾಲಿಟೆಕ್ನಿಕ್‌ಗಳಲ್ಲಿ ಪ್ರಾರಂಭಿಸಲಾಗಿದೆ. 1992-93 ನೇ ಸಾಲಿನಲ್ಲಿ 51 ವೃತ್ತಿ ಶಿಕ್ಷಣ ಕೋರ್ಸುಗಳನ್ನು 34 ಇಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್‌ಗಳಲ್ಲಿ ಪ್ರಾರಂಭಿಸಲಾಗಿದೆ.

ಈ) ಪ್ರತಿ ಕೋರ್ಸಿಗೆ ರೂ. 1,81,000-00

<u>ವಿಷಯ : ಬೆಂಗಳೂರು ಡೈರಿ ಏಜೆಂಟರ್ ಸಂಖ್ಯೆ.</u>

1065

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ಬೆಂಗಳೂರು ನಗರದಲ್ಲಿರುವ ಬೆಂಗಳೂರು ಡೈರಿ ಏಜೆಂಟರ ಸಂಖ್ಯೆ.

ಆ) ಲೀಟರ್ ಅಥವಾ ಪ್ಯಾಕೆಟ್ ಒಂದಕ್ಕೆ ಅವರಿಗೆ ಕೊಡಲಾಗುತ್ತಿರುವ ಕಮಿಷನ್,

ಇ) ಕಮಿಷನ್ ದರವನ್ನು ಹೆಚ್ಚಿಸುವ ಬಗ್ಗೆ ಬೆಂಗಳೂರು ಡೇರಿ ಏಜೆಂಟರುಗಳಿಂದ ಯಾವುದಾದರೂ ಮನವಿಗಳು ಬಂದಿವೆಯೇ?

ಈ) ಸರ್ಕಾರವು ಕಮೀಷನ್ ದರವನ್ನು ಹೆಚ್ಚಿಸುವ ಬಗ್ಗೆ ತೆಗೆದುಕೊಂಡಿರುವ ಕ್ರಮಗಳು .

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಆ) 627

ಆ) ಲೀಟರೊಂದಕ್ಕೆ ರೂ. 0.12

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

<u>ವಿಷಯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಶೌಚಾಲಯ ಮತ್ತು ಆಟದ ಮೈದಾನ.</u>

1186

ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಆ) ದಕ್ಷಿಣ ಕನ್ನಡ ಜಿಲ್ಲೆಯ ಕಿರಿಯ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ

ವಿದ್ಯಾರ್ಥಿಗಳಿಗೆ ಶೌಚಾಲಯ ಮತ್ತು ಆಟದ ಮೈದಾನ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಅದು ಎಲ್ಲೆಲ್ಲಿ (ತಾಲ್ಲೂಕುವಾರು ವಿವರ ನೀಡುವುದು).

ಇ) ಬಂದಿದ್ದರೆ ಈ ಕೊರತೆಯನ್ನು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಡಾ॥ ಹೆಗ್ಗಪ್ಪ ಡಿ.ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ)

ಕ್ರಮ ಸಂಖ್ಯೆ	ಶಾಲೆಗಳ ಹೆಸರು	ಶಾಲೆಗಳ ಸಂಖ್ಯೆ	ಶೌಚಾಲಯ ಇಲ್ಲದಿರುವ ಶಾಲೆಗಳ ಸಂಖ್ಯೆ	ಆಟದ ಮೈದಾನ ಇಲ್ಲದಿರುವ ಶಾಲೆಗಳ ಸಂಖ್ಯೆ
1)	ಕುಂದಾಪುರ	258	206	41
2)	ಸುಳ್ಯ	132	98	17
3)	ಪುತ್ತೂರು	171	152	108
4)	ಉಡುಪಿ	145	71	60
5)	ಬೆಳ್ತಂಗಡಿ	154	65	43
6)	ಬಂಟ್ವಾಳ	143	86	82
7)	ಕಾರ್ಕಳ	179	145	90
8)	ಮಂಗಳೂರು	147	15	41
		1329	838	482

ಇ) ಜಿಲ್ಲಾ ಪರಿಷತ್‌ಗಳಿಗೆ ಈ ಬಾಬ್ತು ಸಾಕಷ್ಟು ಆಯವ್ಯಯ ಒದಗಿಸಿಕೊಂಡು ಹಂತಹಂತವಾಗಿ ಈ ಎರಡು ಸೌಲಭ್ಯಗಳನ್ನು ಪೂರೈಕೆ ಮಾಡಲು ಸರ್ಕಾರದ ಮಟ್ಟದಿಂದ ಸೂಚನೆ ನೀಡಲಾಗುವುದು.

<u>ವಿಷಯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ.</u>

780

ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ? ಎಷ್ಟು ಆರೋಗ್ಯ ಘಟಕಗಳಿವೆ?

ಆ) ಅವುಗಳು ಎಲ್ಲೆಲ್ಲಿ ಇವೆ? (ಪ್ರತ್ಯೇಕ ವಿವರಣೆ ನೀಡುವುದು)

ಇ) ಈ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಘಟಕಗಳಲ್ಲಿ ಡಾಕ್ಟರುಗಳು ಇದ್ದಾರೆಯೇ? ಎಲ್ಲಾ ಕಡೆಗಳಲ್ಲಿ ಸಾಕಷ್ಟು ಸಿಬ್ಬಂದಿಗಳಿರುವರೇ?

ಈ) ಈ ಎಲ್ಲಾ ಕಡೆಗೂ ಸರಿಯಾಗಿ ಔಷಧಿ ಪೂರೈಕೆಯಾಗುತ್ತದೆಯೇ?

ಉ) ಈ ಎಲ್ಲಾ ಕಡೆಗಳಲ್ಲಿ ಏನಾಗುತ್ತಿದೆ ಎಂಬ ತಪಾಸಣೆ ಜಿಲ್ಲಾ ಹೆಲ್ತ್ ಆಫೀಸರರ ಆಫಿಸಿನಿಂದ ನಡೆಯುತ್ತಿದೆಯೇ?